

ಹೈಬಿಸ್ಕಸ್ ಲೊಬಾಟಸ್

# ಹಾದಿಬದಿಯ ಚೆಲುವೆಯರು

**ಸೃಷ್ಟಿಯ ಸೌಂದರ್ಯವನ್ನೆಲ್ಲ ತಮ್ಮೊಳಗೆ ಬಚ್ಚಿಟ್ಟುಕೊಂಡಂತಿರುವ ಈ ಹೂ ರಾಣಿಯರು ನಗುವರಳಿಸುತ್ತಾ ನಿಂತ ಪರಿಗೆ ಮನಸೋಲದಿರಲು ಸಾಧ್ಯವೇ? ಮನದ ಕಣ್ಣು ತೆರೆದು ನೋಡಿದರೆ, ಈ ಮಾಯಾಲೋಕ ಎಲ್ಲರಿಗೂ ಕಂಡೀತು!**

**■ ಲೋಕೇಶ್ ಮೊಸಳೆ**

ಸುಖಕ್ಕಾಗಿ ಕಾತರಿಸುವ
ಕೋಟ್ಯಂತರ ಜನಕ್ಕೆ ಹಣ, ನೆಲ
ಹೊನ್ನು ಬೇಕು,
ಕೆಲವರಿಗೆ ಪ್ರೀತಿ
ಎಲ್ಲೋ ಕೆಲವರಿಗೆ ಕುಗ್ರಾಮದ
ಹಿತ್ತಿಲೊಂದರ ಹೂವು,
ಬಡ ಜೋಗಿಯ ಹಾಡು.
—ನೀಲು

ಅದು ಹೊಸ ಬಡಾವಣೆ. ಅಲ್ಲೊಂದು ಇಲ್ಲೊಂದು ಮನೆಗಳು. ಹೀಗಾಗಿ ನಿರ್ಜನ ಪ್ರದೇಶವೆಂದೇ ಹೇಳಬಹುದು. ರಸ್ತೆ ಬದಿಯಲ್ಲಿ ಥರಾವರಿ ಜಾತಿಯ ಹುಲ್ಲು ಬಳ್ಳಿ, ಗಿಡಗಂಟೆಗಳು. ಕುರುಚಲು ಪೊದೆ, ಕಾಡಗಿಡಗಳು ಹೋರಾಡುತ್ತಲೇ ಪ್ರತಿ ಮಳೆಗಾಲದಲ್ಲಿ ಚಿಗುರುತ್ತಿವೆ. ಹೀಗಾಗಿ ಚಿಟ್ಟೆ—ಕೀಟ ಪ್ರಪಂಚ ಇನ್ನೂ ದೂರವಾಗಿಲ್ಲದಿರುವುದರಿಂದ ಪಕ್ಷಿಲೋಕವೂ ಜೀವಂತವಾಗಿದೆ.

ನಿವೇಶನದ ಮಾಲೀಕರು ಈ ವಸತಿ ಪ್ರದೇಶವನ್ನು ಇನ್ನೂ ಆಕ್ರಮಿಸಿಕೊಂಡಿಲ್ಲವಾದ್ದರಿಂದ ವನ್ಯಜೀವ ಸಂಕುಲ ಇಲ್ಲಿ ಹೋರಾಟದ ಬದುಕನ್ನು ನಡೆಸುತ್ತಿದೆ.

ಪಕ್ಕದ ಬಡಾವಣೆಯ ವೀಕೆಂಡ್ ಕ್ರಿಕೆಟಿಗರು ಈ ಹೊಸ ಬಡಾವಣೆಯ ಬಯಲಿಗೆ ಬರುತ್ತಾರೆ,



ಅಗೆರೇಟಂ ಹ್ಯೂಸ್ಟಾನಿಯೇನಂ



ತಬೂಬಿಯಾ